ಓ .ಎಸ್ . ನಂ. 351/2011 ಡಿಡಬ್ಲ್ಯೂ: 1

**ದಿನಾಂಕ 01.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಡಿ.ಎಸ್.ಬಿ ವಾದಿ ಪರ ವಕೀಲರಿಂದಃ**

ಫಯಾಜ್ ಅಯಾದ್ ಖಾನ್ ರವರು 6ನೇ ಪ್ರತಿವಾದಿ ಕಂಪನಿಯ ನಿರ್ದೇಶಕರಾಗಿರುತ್ತಾರೆ. ಫಯಾಜ್ ಅಯಾದ್ ಖಾನ್ ರವರು 6ನೇ ಪ್ರತಿವಾದಿ ಕಂಪನಿಯ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 6ನೇ ಪ್ರತಿವಾದಿ ಕಂಪನಿಯ ಅಸ್ತಿತ್ವದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 6ನೇ ಪ್ರತಿವಾದಿ ಕಂಪನಿಯ ಅಸ್ತಿತ್ವದ ಕುರಿತು ಎಂ.ಓ.ಯು ಪತ್ರವನ್ನು ಹಾಜರು ಪಡಿಸಿರುತ್ತೇನೆ. ಸದರಿ ಪತ್ರದಲ್ಲಿ ಫಯಾಜ್ ಅಯಾದ್ ಖಾನ್ ರವರ ಹೆಸರು ಇರುತ್ತದೆ. ಸದರಿ ಪತ್ರದಲ್ಲಿ ಫಯಾಜ್ ಅಯಾದ್ ಖಾನ್ ರವರನ್ನು ನಿರ್ದೇಶಕರು ಎಂದು ತೋರಿಸಲಾಗಿದೆ. ಫಯಾಜ್ ಅಯಾದ್ ಖಾನ್ ರವರನ್ನು ಹೊರತು ಪಡಿಸಿ ಇನ್ನು 3 ಜನ ನಿರ್ದೇಶಕರು ಇರುತ್ತಾರೆ. ನಿಡಿ–1ನ್ನು ನನಗೆ ಫಯಾಜ್ ಅಯಾದ್ ಖಾನ್ ರವರು ಮಾತ್ರ ಬರೆದುಕೊಟ್ಟಿರುತ್ತಾರೆ. ನಿಡಿ–1ಕ್ಕೆ 6ನೇ ಪ್ರತಿವಾದಿಯ ಉಳಿದ ನಿರ್ದೇಶಕರು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಫಯಾಜ್ ಅಯಾದ್ ಖಾನ್ ರವರು ಅಧ್ಯಕ್ಷರಾಗಿರುತ್ತಾರೆಂದು ನುಡಿಯುತ್ತಾರೆ. ಫಯಾಜ್ ಅಯಾದ್ ಖಾನ್ ರವರು 6ನೇ ಪ್ರತಿವಾದಿಯ ಕಂಪನಿಯ ನಿರ್ದೇಶಕರು ಮತ್ತು ಅಧ್ಯಕ್ಷರಾಗಿರುತ್ತಾರೆಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಎಂ.ಓ.ಯು ಪತ್ರವನ್ನು ಹಾಜರು ಪಡಿಸಿರುತ್ತೇನೆ. 6ನೇ ಪ್ರತಿವಾದಿಯ ಕಂಪನಿಯಲ್ಲಿ ಫಯಾಜ್ ಅಯಾದ್ ಖಾನ್ ರವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿ ನೇಮಿಸಿರುವ ನಡವಳಿಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ಕೆ.ಹೆಚ್ ಖಾನ್ ಬಿನ್ ಲೇಟ್ ಎನ್.ಎ.ಖಾನ್ ರವರು ನನಗೆ ನಿಡಿ–1ನ್ನು ನೀಡಿರುತ್ತಾರೆಂದರೆ ಸರಿ. 6ನೇ ಪ್ರತಿವಾದಿ ಕಂಪನಿಯಲ್ಲಿ ನಾನು ನೌಕರನಾಗಿರುತ್ತೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುವುದಿಲ್ಲ. ದಾವಾಸ್ತಿಯು ಮೂಲತಃ ಬಾಲಕೃಷ್ಣ ರವರಿಗೆ ಎಲ್.ಆರ್.ಎಫ್ ಆದೇಶದ

ಮುಖಾಂತರ ಬಂದಿರುತ್ತದೆ. ದಾವಾಸ್ತಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಸರ್ಕಾರದಿಂದ ಅನುಮತಿ ಪಡೆದುಕೊಂಡಿರುವುದಿಲ್ಲ. ಬಾಲಕೃಷ್ಣ ರವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಭಾಗದ ಜಮೀನನ್ನು ವಾದಿಗೆ ಮಾರಾಟ ಮಾಡಲು ಕ್ರಯದ ಕರಾರನ್ನು ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆ ಬಾಕಿ ಇರಬೇಕಾದರೆ ನಾವು ದಾವಾಸ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ . ದಾವಾಸ್ತಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ದಾವೆ ಬಾಕಿ ಇರುವ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ದಾವೆ ಬಾಕಿ ಇರುವ ಬಗ್ಗೆ ಪ್ರತಿವಾದಿ 1 ರಿಂದ 5 ರವರನ್ನು ವಿಚಾರಣೆ ಮಾಡಿರುತ್ತೇವೆ ಅವರು ಯಾವುದೇ ದಾವೆ ಬಾಕಿ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಿಡಿ-30 ರ ಆದೇಶವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಎಲ್.ಆರ್.ಎಫ್ ಮಂಜುರಾತಿಯ ಕುರಿತು ಯಾವುದೇ ತಕರಾರು ಉಂಟಾಗಿರುವುದಿಲ್ಲ. ದಾವಾಸ್ತಿಯನ್ನು ನಾವು ಖರೀದಿ ಮಾಡುವ ಸಂದರ್ಭದಲ್ಲಿ ದಾವಾಸ್ತಿಯನ್ನು ಖರೀದಿ ಮಾಡದಂತೆ ವಾದಿ ನಮಗೆ ನೋಟೀಸು ನೀಡಿರುತ್ತಾರೆಂದರೆ ಸರಿಯಲ್ಲ. ದಾವಾಸ್ತಿಯನ್ನು ಮಾರಾಟ ಮಾಡದಂತೆ ವಾದಿಯು ನಿಪಿ-4 ಮತ್ತು ನಿಪಿ-9 ರಂತೆ ತಹಶೀಲ್ದಾರ್ ಹಾಗೂ ಉಪ ನೋಂದಣಾಧಿಕಾರಿಗಳಿಗೆ 2011 ಮತ್ತು 2012ನೇ ಸಾಲಿನಲ್ಲಿ ತಕರಾರು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯು ನಿಪಿ-3ರಂತೆ 7ನೇ ಪ್ರತಿವಾದಿಗೆ ತಕರಾರು ನೀಡಿರುತ್ತಾರೆಂದರೆ ಸರಿ. ದಾವೆಯು ಬಾಕಿ ಇರಬೇಕಾದರೆ ಆಸ್ತಿ ಮಾರಾಟ ಮಾಡಿರುವ ಬಗ್ಗೆ ಪ್ರತಿವಾದಿ -1 ರಿಂದ 5 ರವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ದಾವಾಸ್ತಿಗೆ ಸಂಬಂಧಪಟ್ಟಂತೆ ಯಾವುದಾದರೂ ತಕರಾರು ಉಂಟಾದಲ್ಲಿ ಪ್ರತಿವಾದಿ -1 ರಿಂದ 5 ರವರು ಬಾಧ್ಯಪಡುತ್ತಾರೆಂದು ನಿಡಿ-7 ರಲ್ಲಿ ನಮೂದಿಸಿರುತ್ತದೆ ಎಂದರೆ ಸರಿ .

ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸುವ ಸಂದರ್ಭದಲ್ಲಿ ಪಹಣಿ, ಮ್ಯುಟೇಶನ್, ಅಡಂಗಲ್, ಋಣಭಾರ ರಾಹಿತ್ಯ ಪತ್ರ ದಾಖಲೆಗಳನ್ನು ನೋಡಿ ಬರೆಯಿಸಿರುತ್ತೇನೆ. ಎಲ್.ಆರ್.ಎಫ್ 51/1975-76ರ ಪ್ರಕರಣದ ಕುರಿತು ನಿಡಿ-7ರಲ್ಲಿ ಉಲ್ಲೇಖಿಸಿರುತ್ತೇವೆ ಎಂದರೆ ಸರಿ . ದಾವಾಸ್ತಿ ಎಲ್.ಆರ್.ಎಫ್ ಆದೇಶದಂತೆ ಮಂಜುರಾಗಿರುವುದರಿಂದ ಸರ್ಕಾರದ ಪೂರ್ವನುಮತಿಯ ಯಾವುದೇ ಆದೇಶದ ಬಗ್ಗೆ ನಿಡಿ-7 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ .

ವಾದಿಯು 2004 ನೇ ಸಾಲಿನಲ್ಲಿ ಬಾಲಕೃಷ್ಣ ರವರಿಂದ ಕ್ರಯದ ಕರಾರು ಪಡೆದು ಅಂದಿನಿಂದಲೂ ದಾವಾಸ್ತಿಯ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾಸ್ತಿಯು ವಾದಿಯ ಸ್ವಾಧೀನದಲ್ಲಿರುವುದರಿಂದ ಅದನ್ನು ಖರೀದಿ ಮಾಡುವ ಯಾವುದೇ ಹಕ್ಕು ಅಧಿಕಾರ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಬಾಕಿ ಇರಬೇಕಾದರೆ ನಿಡಿ–7ರ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ